ಅಸಲ ದಾವಾ ನಂ.**358/2011**
ಡಿಡಬ್ಲೂ-**02**

ದಿನಾಂಕ**: 26-09-2023** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣೀಕರಿಸಲಾಯಿತು.

**ಪಾಟೀ ಸವಾಲು: 13 ರಿಂದ 17 ನೇ ಪ್ರತಿವಾದಿ ಪರ**

**ಶ್ರೀ.ಎಸ್.ವಿ.ಜೆ. ವಕೀಲರಿಂದ**

1) ನಾನು ಸೋಸೈಲ್ ವೆಲ್ಫೇರ್ ಇಲಾಖೆಯಲ್ಲಿ ಕೆಲಸ ಮಾಡುತ್ತಿದ್ದೆನು. ನಾನು ನಿವೃತ್ತನಾಗಿ 10 ವರ್ಷಗಳಾಗಿರುತ್ತವೆ. ನನ್ನ ತಂದೆ ಮೈನುದ್ದೀನ್ ಖಾಜಿ ಪೋಲೀಸ್ ಆಫೀಸರ್ ಇದ್ದರು. ನನ್ನ ತಂದೆ 1995 ರಲ್ಲಿ ತೀರಿಕೊಂಡಿರುತ್ತಾರೆ. ನಿಮ್ಮ ತಂದೆ ತೀರಿಕೊಂಡಾಗ ದಾವಾ ಜಮೀನು ಸರ್ವೆ ನಂ.292 ಮತ್ತು 296 ನಿಮ್ಮ ತಂದೆಯ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಇರಲಿಲ್ಲ ಎಂದು ಉತ್ತರಿಸುತ್ತಾರೆ. 1957 ರಿಂದ 1980 ರವರೆಗೆ ದಾವಾ ಜಮೀನುಗಳು ನನ್ನ ಹೆಸರಿನಲ್ಲಿ ಇದ್ದವು.

2) ನಿಮ್ಮ ತಂದೆ ತೀರಿಕೊಂಡ ನಂತರ ಉಪ ತಹಶೀಲದಾರ ಕೋಲಾರ ರವರ ಮುಂದೆ ಅರ್ಜಿ ಏನಾದರೂ ಕೊಟ್ಟಿದ್ದೀರಾ ಎಂದರೆ ಸಾಕ್ಷಿಯು ಕೊಟ್ಟಿದ್ದೇನೆ ಎಂದು ಉತ್ತರಿಸುತ್ತಾರೆ. RTSCR ನಂ.7/2003-04 ಪ್ರಕರಣ ನಡೆದಿತ್ತು ಎಂದರೆ ಸರಿ. ಉಪ ತಹಶೀಲದಾರ ಕೋಲಾರದಲ್ಲಿ ಈ ಎರಡು ಆಸ್ತಿಗಳು ನಿಮ್ಮ ದೊಡ್ಡಪ್ಪ ಮೃತ್ಯು ಪತ್ರ ಮಾಡಿದ ಪ್ರಕಾರ ಬಂದಿದೆ ಎಂದು ಹೇಳಿದ್ದೀರಿ ಎಂದರೆ ಸರಿ. RTSCR ಪ್ರಕರಣದ ಪ್ರಕಾರ ಡ.ನಂ.5737 ಮಂಜೂರು ಆಯಿತು ಎಂದರೆ ಸರಿ.

ನಿಮ್ಮ ಹೆಸರು ಡ.ನಂ.5737 ರ ಪ್ರಕಾರ ಬಂದಿದೆ ಎಂದರೆ ಸರಿ. ಉಪ ತಹಶೀಲದಾರ ಆದೇಶವನ್ನು ನಿಮ್ಮ ಅಣ್ಣ ತಮ್ಮಂದಿರರು ಎ.ಸಿ. ಕಛೇರಿಯಲ್ಲಿ ಅಫೀಲು ಮಾಡಿದ್ದರು ಎಂದರೆ ಸರಿಯಲ್ಲ. ಅದರಂತೆ RTSCR No.1/2008-09 ಪ್ರಕರಣ ದಾಖಲಾಗಿತ್ತು ಎಂದರೆ ಸಾಕ್ಷಿಯು ಸುಳ್ಳು ರೀತಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಡಿ.ಸಿ. ಯವರು ಆದೇಶ ಮಾಡಿ ಡ.ನಂ.5737 ಅನ್ನು ರದ್ದುಪಡಿಸಿದ್ದಾರೆ ಎಂದರೆ ಸಾಕ್ಷಿಯು ರದ್ದುಪಡಿಸಿಲ್ಲ ಎಂದು ಉತ್ತರಿಸುತ್ತಾರೆ.

3) ಸದರಿ ಪ್ರಕರಣದಲ್ಲಿ ನಿಮ್ಮ ದೊಡ್ಡಪ್ಪ ಆಸ್ತಿಗಳನ್ನು ಬಿಟ್ಟುಕೊಟ್ಟಿದ್ದಾರೆ ಎಂದು ಹೇಳಿದ್ದೀರಿ ಎಂದರೆ ಸಾಕ್ಷಿಯು ದೊಡ್ಡಪ್ಪನಿಂದ ಬಂದಿದೆ ಎಂದು ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ತೀರಿಕೊಂಡಾಗ, ನಿಮ್ಮ ತಂದೆಯ ಹೆಸರಿನಲ್ಲಿ ತೆಲಗಿ ಕೇನರಾ ಬ್ಯಾಂಕಿನಲ್ಲಿ 1,28,000/- ಠೇವಣಿ ಇತ್ತು ಎಂದರೆ ಸರಿ. 1,28,000/- ರೂಪಾಯಿಯಲ್ಲಿ ಭಾಗ ಬೇಕು ಎಂದು ನೀವು ಅಸಲು ದಾವೆ ನಂ.314/1998 ಮಾಡಿದ್ದೀರಿ ಎಂದರೆ ಸಾಕ್ಷಿಯು ಸಂಪೂರ್ಣ ಹಣ ನನ್ನದು ಎಂದು ದಾವೆ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ. ಯಾವ ರೀತಿ ಸಂಪೂರ್ಣ ಹಣ ಬೇಕು ಎಂದು ಕೇಳಿದ್ದೀರಿ ಎಂದರೆ ಸಾಕ್ಷಿಯು ನನ್ನ ತಂದೆ ವಿಲ್ ಡೀಡ್ ಮಾಡಿಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ವಿಲ್ ಡೀಡ್ ಅನ್ನು ನ್ಯಾಯಾಲಯಕ್ಕೆ

ಹಾಜರುಪಡಿಸಿರುತ್ತೇನೆ.

4) ಸಾಕ್ಷಿಗೆ ನಿಡಿ-85 ಅನ್ನು ತೋರಿಸಲಾಗಿ ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ನೀವು ಹಾಜರುಪಡಿಸಿದಂತಹ ನಿಪಿ-85 ರ ಪ್ರಕಾರ, ಕೇನರಾ ಬ್ಯಾಂಕಿನಲ್ಲಿ ಇದ್ದಂತಹ ಹಣವನ್ನು ತೆಗೆಯಲು ಮಾತ್ರ ಪರವಾನಿಗೆ ಕೊಟ್ಟಿದ್ದರು ಎಂದರೆ ಸಾಕ್ಷಿಯು ಜಮೀನು ಮತ್ತು ಎಫ್.ಡಿ. ಹಣದ ಬಗ್ಗೆ ಹೇಳಿದ್ದಾರೆ ಎಂದು ಉತ್ತರಿಸುತ್ತಾರೆ. ನಿಪಿ-85 ಅನ್ನು ಕೇನರಾ ಬ್ಯಾಂಕಿನಲ್ಲಿ ಹಾಜರುಪಡಿಸಿರುತ್ತೇನೆ. ನಿಡಿ-85 ರ ಪ್ರಕಾರ ನಿಮಗೆ ಹಣವನ್ನು ಕೊಟ್ಟಿಲ್ಲ ಎಂದರೆ ಸಾಕ್ಷಿಯು ಅವರು ಸದರಿ ಹಣವನ್ನು ಕೊಟ್ಟಿಲ್ಲದಿದ್ದರಿಂದ ಅಸಲ ದಾವಾ ನಂ.314/1998 ಅನ್ನು ಹಾಕಿರುತ್ತೇನೆ. ಸದರಿ ದಾವೆಯಲ್ಲಿ ನಿಮ್ಮ ತಂದೆ ನಿಡಿ-85 ರ ಪ್ರಕಾರ ಮೃತ್ಯು ಪತ್ರ ಬರೆದುಕೊಟ್ಟಿರುವ ಬಗ್ಗೆ ಎಲ್ಲಿಯೂ ಉಲ್ಲೇಖ ಇಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಸಾಕ್ಷಿಗೆ ಅಸಲ ದಾವಾ ನಂ.314/1998 ರ ವಾದ ಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಸಾಕ್ಷಿಯು ಅದನ್ನು ನೋಡಿ ಒಪ್ಪಿಕೊಂಡಿರುತ್ತಾರೆ. ಸಾಕ್ಷಿಗೆ ಅಸಲ ದಾವಾ ನಂ.314/1998 ರ ವಾದಪತ್ರದ ದೃಡೀಕೃತ ನಕಲನ್ನು ತೋರಿಸಲಾಗಿ ಅದರಲ್ಲಿ ನಿಡಿ-85 ಮೃತ್ಯು ಪತ್ರದ ಬಗ್ಗೆ ಯಾವ ಪ್ಯಾರಾದಲ್ಲಿ ಬರೆದಿದ್ದೀರಿ ಎಂದರೆ ಸಾಕ್ಷಿಯು ಅದನ್ನು ನೋಡಿ ಬರೆದಿಲ್ಲ ಎಂದು ಉತ್ತರಿಸುತ್ತಾರೆ. ನಿಡಿ-

85 ಮೃತ್ಯು ಪತ್ರವನ್ನು ಅಸಲ ದಾವಾ ನಂ.314/1998 ರಲ್ಲಿ ಹಾಜರುಪಡಿಸಿಲ್ಲ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ.

5) ಮೃತ್ಯು ಪತ್ರವನ್ನು ನಿಮ್ಮ ತಂದೆ ಯಾರ ಸಮಕ್ಷಮ ಮಾಡಿಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ನೋಟರಿಯವರ ಸಮಕ್ಷಮ ಎಂದು ಉತ್ತರಿಸುತ್ತಾರೆ. ಯಾವ ಸಾಕ್ಷಿದಾರರ ಸಮಕ್ಷಮ ಎಂದರೆ ಸಾಕ್ಷಿಯು ನನ್ನ ತಾಯಿ ದಾದೀಮಾ ಖಾಜಿ, ಅಕ್ಕ ಹಮೀದಾ ಬಿ. ಖಾಜಿ ಎಂದು ಉತ್ತರಿಸುತ್ತಾರೆ. ಹಮೀದಾ ಬಿ. ಖಾಜಿ ಇವರು ಮಹಮ್ಮದ ಗೌಸ್ ರವರ ಹೆಂಡತಿ ಎಂದರೆ ಸರಿ. ಹಮೀದಾ ಬಿ. ಖಾಜಿ ಎಂದರೆ ಜಾಕೀರ್ ಹುಸೇನ್ ರವರ ತಾಯಿ ಎಂದರೆ ನನಗೆ ಗೊತ್ತಿಲ್ಲ. 13 ರಿಂದ 16 ನೇ ಪ್ರತಿವಾದಿಯರು ಈ ಕೇಸಿನಲ್ಲಿ ಪಾರ್ಟಿಯಾಗಿ ಇದ್ದಾರಾ ಎಂದರೆ ಸಾಕ್ಷಿಯು ಮಧ್ಯಂತರ ಅರ್ಜಿ ಹಾಕಿ ಬಂದಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಅರ್ಜಿಯಲ್ಲಿ ಅವರು ಹಮೀದಾ ಬಿ. ರವರ ಗಂಡ ಮತ್ತು ಮಕ್ಕಳು ಎಂದು ಕೇಳಿದ್ದಾರೆ ಎಂದರೆ ಸಾಕ್ಷಿಯು ಸುಳ್ಳು ಎಂದು ಉತ್ತರಿಸುತ್ತಾರೆ. ಅವರು ಹಾಕಿದಂತಹ ಅರ್ಜಿಗೆ ನೀವು ತಕರಾರು ಹಾಕಿಲ್ಲ ಎಂದರೆ ಸಾಕ್ಷಿಯು ಹಾಕಿದ್ದೇವೆ ಎಂದು ಉತ್ತರಿಸುತ್ತಾರೆ. ಸದರಿ ಮೃತ್ಯು ಪತ್ರವನ್ನು ಮಾಡುವ ಸಮಯದಲ್ಲಿ ಮಹಿಬೂಬಿ ಮುಲ್ಲಾ ಇದ್ದರು ಎಂದು ಉತ್ತರಿಸುತ್ತಾರೆ. ಮಹಿಬೂಬಿ ಮುಲ್ಲಾ ನನಗೆ

ತಂಗಿಯಾಗಬೇಕು. ಮಹಿಬೂಬಿ ಮುಲ್ಲಾ ಈ ಪ್ರಕರಣದಲ್ಲಿ 11 ನೇ ಪ್ರತಿವಾದಿಯಾಗಿ ಪಾರ್ಟಿ ಇದ್ದಾರೆ ಎಂದರೆ ಸಾಕ್ಷಿಯು ಅವರು ಮಧ್ಯಂತರ ಅರ್ಜಿ ಹಾಕಿ ಬಂದಿದ್ದಾರೆ ಎಂದು ಉತ್ತರಿಸುತ್ತಾರೆ. ನೀವು ಮಹಿಬೂಬಿ ಮುಲ್ಲಾರವರ ಪರವಾಗಿ ನಿಮ್ಮ ತಂದೆ ಮೃತ್ಯು ಪತ್ರ ಮಾಡಿದ್ದಾರೆ ಎಂದು ನಿಮ್ಮ ಪರವಾಗಿ ಮಹಿಬೂಬಿ ಮುಲ್ಲಾ ರವರ ಸಾಕ್ಷಿ ಮಾಡಿಸುತ್ತೀರಾ ಎಂದರೆ ಸಾಕ್ಷಿಯು ಅವರು ಬರೆದುಕೊಟ್ಟಿದ್ದಾರೆ, ಈಗ ಸಾಕ್ಷಿ ಹೇಳುವುದಿಲ್ಲ ಎಂದು ಉತ್ತರಿಸುತ್ತಾರೆ. ಮಹಿಬೂಬಿ ಮುಲ್ಲಾ ರವರನ್ನು ಬಿಟ್ಟು ಇನ್ನೂ ಮೂರು ಸಾಕ್ಷಿದಾರರು ಯಾರು ಎಂದರೆ ಸಾಕ್ಷಿಯು ಬಿ.ಎನ್.ಪಿಂಜಾರ ಮತ್ತು ಎಮ್.ಎ.ಶೇಖ್ ಎಂದು ಉತ್ತರಿಸುತ್ತಾರೆ. ಸದರಿ ಮೃತ್ಯು ಪತ್ರದ ಮೂಲ ಪ್ರತಿ ಎಲ್ಲಿ ಇದೆ ಎಂದರೆ ಸಾಕ್ಷಿಯು ಇದೇ ಪ್ರಕರಣದಲ್ಲಿ ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಿಡಿ-85 ಮೂಲ ಪ್ರತಿ ಅಲ್ಲ ಎಂದರೆ ಸಾಕ್ಷಿಯು ಅಸಲ ದಾವಾ ನಂ.2/2014 ರಲ್ಲಿ ಅದರ ಮೂಲ ಪ್ರತಿಯನ್ನು ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ನಿಡಿ-85 ರ ಪ್ರಕಾರ ಯಾವುದೇ ನ್ಯಾಯಾಲಯ ನಿಮ್ಮ ತಂದೆಗೆ ಮೃತ್ಯು ಪತ್ರವನ್ನು ಮಾಡಿಕೊಟ್ಟಿದ್ದಾರೆ ಎಂದು ಯಾವುದೇ ಆದೇಶ ಆಗಿಲ್ಲ ಎಂದರೆ ಸಾಕ್ಷಿಯು ಆಗಿದೆ ಎಂದು ಉತ್ತರಿಸುತ್ತಾರೆ. ಯಾವ ಪ್ರಕರಣದಲ್ಲಿ ಆದೇಶ ಆಗಿದೆ ಎಂದರೆ ಸಾಕ್ಷಿಯು RTSCR 7/2003 ರಲ್ಲಿ ಎಂದು

ಉತ್ತರಿಸುತ್ತಾರೆ. ಸದರಿ RTSCR 7/2003 ಅನ್ನು ಡಿ.ಸಿ. ಯವರು 2010 ರಲ್ಲಿ ರದ್ದುಪಡಿಸಿದ್ದಾರೆ ಎಂದರೆ ಸಾಕ್ಷಿಯು ರದ್ದುಪಡಿಸಿಲ್ಲ ಎಂದು ಉತ್ತರಿಸುತ್ತಾರೆ.

6) ಈ ದಾವಾದ ಜಮೀನಿನ ಸಂಬಂಧವಾಗಿ ಎಷ್ಟು ಮೃತ್ಯು ಪತ್ರಗಳನ್ನು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಐದು ಮೃತ್ಯು ಪತ್ರ ಎಂದು ಉತ್ತರಿಸುತ್ತಾರೆ. ಸದರಿ ಐದು ಮೃತ್ಯು ಪತ್ರಗಳನ್ನು ಯಾರ್ಯಾರು ಬರೆದುಕೊಟ್ಟಿದ್ದಾರೆ ಎಂದರೆ ಸಾಕ್ಷಿಯು ಯಾಸೀನ್ ಖಾನ್ ಮುಲ್ಲಾ, ಮೈನುದ್ದೀನ್ ಖಾಜಿ ಮತ್ತು ದಾದೀಮಾ ಖಾಜಿ ಎಂದು ಉತ್ತರಿಸುತ್ತಾರೆ. ಯಾಸೀನ್ ಖಾನ್ ಮುಲ್ಲಾ ಇವರು 1957 ರಲ್ಲಿ ಮೃತ್ಯು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ಯಾಸೀನ್ ಖಾನ್ ಮುಲ್ಲಾ ಇವರು 1988 ರಲ್ಲಿ ತೀರಿಕೊಂಡಿರುತ್ತಾರೆ. ಯಾಸೀನ್ ಖಾನ್ ಮುಲ್ಲಾ ತೀರಿಕೊಂಡಾಗ ಸರ್ವೆ ನಂ.292 ಮತ್ತು 296 ಆಸ್ತಿಗಳು ಅವರ ಹೆಸರಿನಲ್ಲಿ ಇರಲಿಲ್ಲ ಎಂದರೆ ಸರಿ. ಯಾಸೀನ್ ಖಾನ್ ಮುಲ್ಲಾ 1988 ರಲ್ಲಿ ತೀರಿಕೊಂಡಾಗ ಈ ಎರಡೂ ಆಸ್ತಿಗಳು ಮೈನುದ್ದೀನ್ ಖಾಜಿ ರವರ ಹೆಸರಿನಲ್ಲಿ ಇತ್ತು ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ಯಾಸೀನ್ ಖಾನ್ ಮುಲ್ಲಾ ಬರೆದುಕೊಟ್ಟ ಮೃತ್ಯು ಪತ್ರದ ಪ್ರಕಾರ, ಯಾವುದೇ ನ್ಯಾಯಾಲಯದಿಂದ ಆದೇಶ ಪಡೆದುಕೊಂಡಿಲ್ಲ ಎಂದರೆ ಸಾಕ್ಷಿಯು RTSCR ಪ್ರಕರಣ ಮಾಡಿದ್ದೇನೆ

ಮತ್ತು ಮಾನ್ಯ ಉಚ್ಚ ನ್ಯಾಯಾಲಯ ಬೆಂಗಳೂರಿನಲ್ಲಿ ಮಾಡಿದ್ದೇನೆ ಎಂದು ಉತ್ತರಿಸುತ್ತಾರೆ.

7) 1999 ರಲ್ಲಿ ದಾದೀಬಿ ಖಾಜಿ ಇವರು ಮೃತ್ಯು ಪತ್ರವನ್ನು ಬರೆದುಕೊಟ್ಟಿರುತ್ತಾರೆ. ದಾದೀಬಿ ಖಾಜಿ ಇವರು ನೆವೆಂಬರ್ 1999 ರಲ್ಲಿ ತೀರಿಕೊಂಡಿರುತ್ತಾರೆ. ದಾದೀಬಿ ಖಾಜಿ ತೀರಿಕೊಂಡಾಗ ಈ ಎರಡೂ ಜಮೀನುಗಳು ನನ್ನ ಹೆಸರಿನಲ್ಲಿ ಇದ್ದವು. ನಿಮ್ಮ ಹೆಸರಿನಲ್ಲಿ ಇದ್ದಂತಹ ಆಸ್ತಿಯನ್ನು ನಿಮಗೆ ಬಿಟ್ಟುಕೊಟ್ಟಿದ್ದಾರೆ ಎಂದರೆ ಸರಿ. ಸಾಕ್ಷಿಗೆ ನಿಡಿ-1 ಪಹಣಿಯನ್ನು ತೋರಿಸಲಾಗಿ, ಅದರಲ್ಲಿ ಯಾರ ಹೆಸರು ಇದೆ ಎಂದರೆ ಸಾಕ್ಷಿಯು ಅದನ್ನು ನೋಡಿ ದಾದೀಬಿ ಖಾಜಿ, ನನ್ನ ಹೆಸರು ಮತ್ತು ಉಳಿದವರ ಹೆಸರು ಇದೆ ಎಂದು ಉತ್ತರಿಸುತ್ತಾರೆ. ಉಳಿದವರು ನಿಜಾಮುದ್ದೀನ್ ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿಯು ಮೊದಲು ನನ್ನ ತಮ್ಮ ಆಗಿದ್ದನು, ಈಗ ಇಲ್ಲ ಎಂದು ಉತ್ತರಿಸುತ್ತಾರೆ. ನೂರುದ್ದೀನ್ ಏನು ಆಗಬೇಕು ಎಂದರೆ ಸಾಕ್ಷಿಯು ಮೊದಲು ನನ್ನ ತಮ್ಮ ಆಗಿದ್ದನು, ಈಗ ಹೆಸರು ಬದಲಾಯಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಮಾಮುಬಿ ಅಲ್ಲಾವುದ್ದೀನ್ ಮುಲ್ಲಾ ನಿಮಗೆ ಏನು ಆಗಬೇಕು ಎಂದರೆ ಸಾಕ್ಷಿಯು ಮೊದಲು ನನ್ನ ತಂಗಿಯಾಗಿದ್ದಳು, ಈಗ ಹೆಸರು ಬದಲಾಯಿಸಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಬಿಸ್ಮಿಲ್ಲಾ ಜೈನುಸಾಬ ಜಾಗೀರದಾರ ಏನು ಆಗಬೇಕು ಎಂದರೆ ಸಾಕ್ಷಿಯು ಮೊದಲು

ತಂಗಿ ಆಗಿದ್ದರು ಎಂದು ಉತ್ತರಿಸುತ್ತಾರೆ. ಖೈರುನಬಿ ಮೈನುದ್ದೀನ್ ಖಾಜಿ ಏನು ಆಗಬೇಕು ಎಂದರೆ ಸಾಕ್ಷಿಯು ಮೊದಲು ತಂಗಿಯಾಗಿದ್ದರು ಎಂದು ಉತ್ತರಿಸುತ್ತಾರೆ. ಹಮೀದಾ ಬೇಗಮ್ ನನ್ನ ಅಕ್ಕಳಾಗಬೇಕು. ಮೈನುದ್ದೀನ್ ಖಾಜಿ ತೀರಿಕೊಂಡ ನಂತರ ಇವರ ಎಲ್ಲರ ಹೆಸರು ವಾರಸಾ ನಾತೆಯಿಂದ ನಮೂದು ಆಗಿದೆ ಎಂದರೆ ಸರಿಯಲ್ಲ. ಇವರೆಲ್ಲರೂ ಸುಳ್ಳು ರೀತಿಯಿಂದ ಮಾಡಿಕೊಂಡಿದ್ದಾರೆ ಎಂದು ಯಾವುದೇ ನ್ಯಾಯಾಲಯದವರು ಆದೇಶ ಮಾಡಿಲ್ಲ ಎಂದರೆ ಸಾಕ್ಷಿಯು ಉಪ ತಹಶೀಲದಾರ ಕೋಲಾರ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ನಿಡಿ-3 ರಲ್ಲಿ ಅವರ ಹೆಸರು ಬಂದಿವೆ ಎಂದರೆ ಸಾಕ್ಷಿಯು ಸುಳ್ಳು ರೀತಿಯಿಂದ ಮಾಡಿಕೊಂಡಿದ್ದಾರೆ ಎಂದು ಉತ್ತರಿಸುತ್ತಾರೆ. ಮೈನುದ್ದೀನ್ ಖಾಜಿ ತೀರಿಕೊಂಡ ನಂತರ ಇವರೆಲ್ಲರೂ ದಾವಾ ಜಮೀನಿನಲ್ಲಿ ಜಂಟಿ ಕಬ್ಜೆಯಲ್ಲಿ ಮತ್ತು ಜಂಟಿ ಮಾಲೀಕರು ಇದ್ದಾರೆ ಎಂದರೆ ಸಾಕ್ಷಿಯು ಎಲ್ಲರೂ ಸ್ವ-ಸಂತೋಷದಿಂದ ಬರೆದುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. 1999 ಮತ್ತು 2003 ರಲ್ಲಿ ಅವರೆಲ್ಲರೂ ಸ್ವ-ಸಂತೋಷದಿಂದ ಬರೆದುಕೊಟ್ಟಿರುತ್ತಾರೆ. ಸದರಿ ದಾಖಲೆಯನ್ನು ಹಾಜರುಪಡಿಸಿದ್ದೀರಾ ಎಂದರೆ ಸಾಕ್ಷಿಯು ಹಾಜರುಪಡಿಸಿದ್ದೇನೆ ಎಂದು ಉತ್ತರಿಸುತ್ತಾರೆ. ಈಗ ಆ ದಾಖಲೆಗಳನ್ನು ತೋರಿಸಲು ಆಗುತ್ತಾ ಎಂದರೆ ಸಾಕ್ಷಿಯು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಅಕ್ಕ

ತಂಗಿಯವರು ಮತ್ತು ಅಣ್ಣ ತಮ್ಮಂದಿರರು ಯಾವುದೇ ಆಸ್ತಿಯನ್ನು ಬಿಟ್ಟುಕೊಟ್ಟಿಲ್ಲ ಎಂದರೆ ಸಾಕ್ಷಿಯು ತಹಶೀಲದಾರ ಮುಂದೆ ಬಿಟ್ಟುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ. ಇವತ್ತಿನವರೆಗೂ ಉತಾರೆಯಲ್ಲಿ ಎಲ್ಲರ ಹೆಸರು ಜಂಟಿ ಮಾಲೀಕರು ಮತ್ತು ಜಂಟಿ ಕಬ್ಜೆದಾರರು ಎಂದು ಇದೆ ಎಂದರೆ ಸಾಕ್ಷಿಯು ಹೆಸರು ಕಡಿಮೆ ಮಾಡಿಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ತಂದೆ ನಿಮಗೆ ಮೃತ್ಯು ಪತ್ರವನ್ನು ಮಾಡಿ ಬಿಟ್ಟುಕೊಟ್ಟರೂ ಸಹ, ನಿಮ್ಮ ಅಣ್ಣ ತಮ್ಮಂದಿರರು ಮತ್ತು ಅಕ್ಕ ತಂಗಿಯರು ಸದರಿ ಆಸ್ತಿಗಳನ್ನು ಬಿಟ್ಟುಕೊಡುವ ಪ್ರಸಂಗ ಯಾಕೆ ಬಂತು ಎಂದರೆ ಸಾಕ್ಷಿಯು ಸುಳ್ಳು ರೀತಿಯಿಂದ ಮಾಡಿಕೊಂಡಿದ್ದರು, ನಂತರ ಬಿಟ್ಟುಕೊಟ್ಟಿದ್ದಾರೆ ಎಂದು ಉತ್ತರಿಸುತ್ತಾರೆ.

8) ಸರ್ವೆ ನಂ.292 ಮತ್ತು 296 ಗಳನ್ನು ಎನ್.ಟಿ.ಪಿ.ಸಿ.ಯವರು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದರೆ ಸಾಕ್ಷಿಯು ಸ್ವಾಧೀನಪಡಿಸಿಕೊಂಡಿರುತ್ತಾರೆ ಎಂದು ಉತ್ತರಿಸುತ್ತಾರೆ. ಭೂಸ್ವಾಧೀನಪಡ ನಂತರ ಎನ್.ಟಿ.ಪಿ.ಸಿ.ಯವರು ನೋಟೀಸನ್ನು ಎಲ್ಲರ ಹೆಸರಿನಲ್ಲಿ ತೆಗೆದಿದ್ದಾರೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಮಾತ್ರ ಬಂದಿದೆ ಎಂದು ಉತ್ತರಿಸುತ್ತಾರೆ. ಎಲ್ಲರ ಹೆಸರಿನಲ್ಲಿ ಅವಾರ್ಡ್ ಆಗಿದೆ ಎಂದರೆ ಸಾಕ್ಷಿಯು ನನ್ನ ಹೆಸರಿನಲ್ಲಿ ಮಾತ್ರ ಆಗಿದೆ ಎಂದು ಉತ್ತರಿಸುತ್ತಾರೆ. ನಿಮ್ಮ ಹೆಸರಿನಲ್ಲಿ ಅವಾರ್ಡ್ ಆಗಿದ್ದನ್ನು ಈ

ಪ್ರಕರಣದಲ್ಲಿ ಹಾಜರುಪಡಿಸಿರುತ್ತೇನೆ. ಸದರಿ ಅವಾರ್ಡ್ ಪ್ರತಿ ನಿಮ್ಮ ದಾಖಲೆಯಲ್ಲಿ ಎಲ್ಲಿ ಇದೆ ಎಂದು ತೋರಿಸಲು ಆಗುತ್ತಾ ಎಂದರೆ ಸಾಕ್ಷಿಯು ಬಹಳ ದಾಖಲೆಗಳು ಇವೆ ಎಂದು ಉತ್ತರಿಸುತ್ತಾರೆ.

9) ಸದರಿ ಪರಿಹಾರ ಹಣದಲ್ಲಿ ನಿಮ್ಮ ಅಕ್ಕ ತಂಗಿಯರು ಮತ್ತು ಅಣ್ಣ ತಮ್ಮದಿರರಿಗೆ ಸಹ ಭಾಗ ಇದೆ ಎಂದರೆ ಸಾಕ್ಷಿಯು ಇಲ್ಲ ಎಂದು ಉತ್ತರಿಸುತ್ತಾರೆ. ನಿಮ್ಮ ಅಕ್ಕ ತಂಗಿಯರು ಮತ್ತು ಅಣ್ಣ ತಮ್ಮಂದಿರರ ಭಾಗವನ್ನು ಮುಳುಗಿಸುವ ಉದ್ದೇಶದಿಂದ ಸದರಿ ಮೃತ್ಯು ಪತ್ರಗಳನ್ನು ಮಾಡಿಕೊಟ್ಟಿದ್ದಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

**10 ನೇ ಪ್ರತಿವಾದಿ ಪರ ವಕೀಲರ ಕೋರಿಕೆ ಮೇರೆಗೆ, ಸಾಕ್ಷಿಯ ಪಾಟೀ ಸವಾಲು ಮುಂದೂಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು)

ಓ ಹೆ ಕೆ ಸರಿ ಅದೆ

ಹೆಚ್ಚುವರಿ ಹಿರಿಯ ಸಿವಿಲ್ ವ ಜೆ ಎಮ್ ಎಫ್ ಸಿ ನ್ಯಾಯಾಧೀಶರು,
ಬಸವನ ಬಾಗೇವಾಡಿ.